Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.


| | | | |
|---|---|---|---|
| सं–1 | नई दिल्ली सोमवार, जनवरी 20, 1992 | पुष्य 30, 1913 (शक) | खन्ड–13 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಜನವರಿ ೨೦, ೧೯೯೨ | ಪುಷ್ಯ ೩೦, ೧೯೧೩ (ಶಕ) | ಸಂಪುಟ ೧೩ |
| No. 1 | New Delhi Monday, January 20, 1992 | Pushya 30, 1913 (Saka) | Vol. 13 |


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ ಅಧಿನಿಯಮ, ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) ತೂಕ ಮತ್ತು ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ (೧೯೭೩ರ ೫೦)ರ ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs
(Legislative Department)
New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ – (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹಕ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) ಮಹಿಳಾ ಅಸಭ್ಯ ನಿರೂಪಣಾ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ ಅಂಚೆ ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರ ಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣೆ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs
(Legislative Department)
New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ [illegible] 1957 (2) [illegible] ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) [illegible] ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು [illegible] 1950 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ [illegible] ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ [illegible] ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸ[illegible]

# ಮಹಿಳೆಯರ ಅಸಭ್ಯ ಪ್ರದರ್ಶನ (ನಿಷೇಧ) ಅಧಿನಿಯಮ, 1986

## (1986ರ ಅಧಿನಿಯಮ ಸಂಖ್ಯೆ 60)

[23ನೇ ಡಿಸೆಂಬರ್, 1986.]

ಜಾಹೀರಾತುಗಳ ಮೂಲಕ ಅಥವಾ ಪ್ರಕಟಣೆಗಳು, ಬರವಣಿಗೆಗಳು, ವರ್ಣಚಿತ್ರಗಳು, ಆಕೃತಿಗಳಲ್ಲಿ ಅಥವಾ ಯಾವುದೇ ಇತರ ರೀತಿಯಲ್ಲಿ ಮಹಿಳೆಯರ ಅಸಭ್ಯ ಪ್ರದರ್ಶನಗಳನ್ನು ನಿಷೇಧಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಕುರಿತು ಅಧಿನಿಯಮ.

ಇದು, ಭಾರತ ಗಣರಾಜ್ಯದ ಮೂವತ್ತೇಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಮಹಿಳೆಯರ ಅಸಭ್ಯ ಪ್ರದರ್ಶನ (ನಿಷೇಧ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಜಾಹೀರಾತು" ಎಂಬುದು ಯಾವುದೇ ನೋಟೀಸು, ಸುತ್ತೋಲೆ, ಲೇಬಲ್, ಮೇಲುಹೊದಿಕೆ ಅಥವಾ ಇತರ ದಸ್ತಾವೇಜನ್ನು ಒಳಗೊಳ್ಳುತ್ತದೆ ಮತ್ತು ಯಾವುದೇ ಬೆಳಕು, ಶಬ್ದ, ಹೊಗೆ ಅಥವಾ ಅನಿಲದ ಮೂಲಕ ಮಾಡಿದ ಯಾವುದೇ ದೃಶ್ಯ ಪ್ರದರ್ಶನವನ್ನು ಸಹ ಒಳಗೊಳ್ಳುತ್ತದೆ;

(ಬಿ) "ವಿತರಣೆ"ಎಂಬುದು ಉಚಿತವಾಗಿ ಅಥವಾ ಅನ್ಯಥಾ ಮಾದರಿಗಳ ರೂಪದಲ್ಲಿನ ವಿತರಣೆಯನ್ನು ಒಳಗೊಳ್ಳುತ್ತದೆ;

(ಸಿ) "ಮಹಿಳೆಯರ ಅಸಭ್ಯ ಪ್ರದರ್ಶನ"ಎಂದರೆ, ಮಹಿಳೆಯ ಮೈಮಾಟ, ಅವಳ ಆಕಾರ ಅಥವಾ ದೇಹ ಅಥವಾ ಅದರ ಯಾವುದೇ ಭಾಗವನ್ನು ಮಹಿಳೆಯರಿಗೆ ಅಸಭ್ಯ ಅಥವಾ

---

* ಅಕ್ಟೋಬರ್ 02, 1987, ಅಧಿಸೂಚನೆ ಸಂಖ್ಯೆ ಜಿ.ಎಸ್.ಆರ್ 821 (ಇ), ದಿನಾಂಕ: 25ನೇ ಸೆಪ್ಟೆಂಬರ್, 1987. ಭಾರತ ವಿಶೇಷ ರಾಜಪತ್ರ, ಭಾಗ II, ವಿಭಾಗ 3(i) ನೋಡಿ.

ಅವಮಾನಕಾರಿಯಾಗಿರುವ ಅಥವಾ ಅವರ ಹೆಸರು ಕೆಡಿಸುವ ಪರಿಣಾಮವನ್ನು ಹೊಂದಿರುವ ಅಥವಾ ಸಾರ್ವಜನಿಕ ನೀತಿನಿಷ್ಠೆ ಅಥವಾ ನೀತಿಯನ್ನು ಕೆಡಿಸುವ, ಭ್ರಷ್ಟಗೊಳಿಸುವ ಅಥವಾ ಅದಕ್ಕೆ ಹಾನಿಯನ್ನುಂಟು ಮಾಡುವ ಸಂಭವವಿರುವ ರೀತಿಯಲ್ಲಿ ನಿರೂಪಿಸುವುದು;

(ಡಿ) "ಲೇಬಲ್"ಎಂದರೆ, ಯಾವುದೇ ಪ್ಯಾಕೇಜಿನ ಮೇಲೆ ಅಂಟಿಸಿದ ಅಥವಾ ಕಂಡುಬರುವ ಯಾವುದೇ ಲಿಖಿತ, ಗುರುತು ಮಾಡಿದ, ಮೊಹರು ಒತ್ತಿದ, ಮುದ್ರಿತ ಅಥವಾ ರೇಖಾಚಿತ್ರಿತ ವಸ್ತು;

(ಇ) "ಪ್ಯಾಕೇಜ್"ಎಂಬುದು ಪೆಟ್ಟಿಗೆ, ರಟ್ಟು ಪೆಟ್ಟಿಗೆ, ಟಿನ್ನು ಅಥವಾ ಇತರ ಪಾತ್ರವನ್ನು ಒಳಗೊಳ್ಳುತ್ತದೆ;

(ಎಫ್) "ನಿಯಮಿಸಿದುದು"ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

**3. ಮಹಿಳೆಯರ ಅಸಭ್ಯ ಪ್ರದರ್ಶನವನ್ನೊಳಗೊಂಡಿರುವ ಜಾಹೀರಾತುಗಳ ನಿಷೇಧ.–** ಯಾರೇ ವ್ಯಕ್ತಿಯು, ಯಾವುದೇ ರೂಪದಲ್ಲಿ ಮಹಿಳೆಯ ಅಸಭ್ಯ ಪ್ರದರ್ಶನವನ್ನೊಳಗೊಂಡಿರುವಂಥ ಯಾವುದೇ ಜಾಹೀರಾತನ್ನು ಪ್ರಕಟಿಸತಕ್ಕದ್ದಲ್ಲ ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದಲ್ಲ ಅಥವಾ ಅದರ ಪ್ರಕಟಣೆ ಅಥವಾ ಪ್ರದರ್ಶನಕ್ಕೆ ವ್ಯವಸ್ಥೆ ಮಾಡತಕ್ಕದ್ದಲ್ಲ ಅಥವಾ ಅದರಲ್ಲಿ ಭಾಗವಹಿಸತಕ್ಕದ್ದಲ್ಲ.

**4. ಮಹಿಳೆಯರ ಅಸಭ್ಯ ಪ್ರದರ್ಶನವನ್ನು ಒಳಗೊಂಡಿರುವ ಪುಸ್ತಕಗಳು, ಕರಪತ್ರಗಳು, ಇತ್ಯಾದಿಗಳ ಪ್ರಕಟಣೆ ಅಥವಾ ಅವುಗಳನ್ನು ಅಂಚೆ ಮೂಲಕ ಕಳುಹಿಸುವುದು, ಇವುಗಳ ಬಗ್ಗೆ ನಿಷೇಧ.–** ಯಾರೇ ವ್ಯಕ್ತಿಯು, ಯಾವುದೇ ರೂಪದಲ್ಲಿ ಮಹಿಳೆಯರ ಅಸಭ್ಯ ಪ್ರದರ್ಶನವನ್ನೊಳಗೊಂಡಿರುವಂಥ ಯಾವುದೇ ಪುಸ್ತಕ, ಕರಪತ್ರ, ಕಾಗದ, ಸ್ಲೈಡ್, ಫಿಲ್ಮ್, ಬರವಣಿಗೆ, ರೇಖಾಚಿತ್ರ, ವರ್ಣಚಿತ್ರ, ಛಾಯಾಚಿತ್ರ, ನಿರೂಪಣೆ ಅಥವಾ ಆಕೃತಿಯನ್ನು ತಯಾರಿಸತಕ್ಕದ್ದಲ್ಲ ಅಥವಾ ತಯಾರಿಸುವಂತೆ ಮಾಡತಕ್ಕದ್ದಲ್ಲ, ಬಾಡಿಗೆಗೆ ಕೊಡತಕ್ಕದ್ದಲ್ಲ, ಹಂಚತಕ್ಕದ್ದಲ್ಲ, ಪರಿಚಲನೆ ಮಾಡತಕ್ಕದ್ದಲ್ಲ ಅಥವಾ ಅಂಚೆ ಮೂಲಕ ಕಳುಹಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ,–

(ಎ) (i) ಯಾವುದರ ಪ್ರಕಟಣೆಯು ಪುಸ್ತಕ, ಕರಪತ್ರ, ಕಾಗದ, ಸ್ಲೈಡ್, ಫಿಲ್ಮ್, ಬರವಣಿಗೆ, ರೇಖಾಚಿತ್ರ, ವರ್ಣಚಿತ್ರ, ಛಾಯಾಚಿತ್ರ, ನಿರೂಪಣೆ ಅಥವಾ ಆಕೃತಿಯು ವಿಜ್ಞಾನ, ಸಾಹಿತ್ಯ, ಕಲೆ ಅಥವಾ ವ್ಯಾಸಂಗ ಅಥವಾ ಸಾಮಾನ್ಯವಾಗಿ ಸಂಬಂಧಪಟ್ಟ ಇತರ ವಿಷಯಗಳ ಹಿತದೃಷ್ಟಿಯಲ್ಲಿ ಸಾರ್ವಜನಿಕ ಒಳಿತಿಗಾಗಿ ಇದೆಯೆಂದು ಸಮರ್ಥಿತವಾಗಿ ರುಜುವಾತಾಗಿದೆಯೋ; ಅಥವಾ

(ii) ಯಾವುದನ್ನು ಧಾರ್ಮಿಕ ಉದ್ದೇಶಗಳಿಗಾಗಿ ಸದ್ಭಾವನೆಯಿಂದ ಇಟ್ಟುಕೊಂಡು ಬರಲಾಗಿದೆಯೋ ಅಥವಾ ಪ್ರಾಮಾಣಿಕವಾಗಿ ಉಪಯೋಗಿಸಲಾಗುತ್ತಿದೆಯೋ

– ಅಂಥ ಯಾವುದೇ ಪುಸ್ತಕ, ಕರಪತ್ರ, ಕಾಗದ, ಸ್ಲೈಡ್, ಫಿಲ್ಮ್, ಬರವಣಿಗೆ, ರೇಖಾಚಿತ್ರ, ವರ್ಣಚಿತ್ರ, ಛಾಯಾಚಿತ್ರ, ನಿರೂಪಣೆ ಅಥವಾ ಆಕೃತಿಗೆ;

(ಬಿ) (i) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ನಿವೇಶನಗಳ ಮತ್ತು ಅವಶೇಷಗಳ ಅಧಿನಿಯಮ, 1958 (1958ರ 24)ರ ಅರ್ಥವ್ಯಾಪ್ತಿಯೊಳಗಿನ ಯಾವುದೇ ಪ್ರಾಚೀನ ಸ್ಮಾರಕದ ಮೇಲೆ ಅಥವಾ ಅದರಲ್ಲಿ; ಅಥವಾ

(ii) ಯಾವುದೇ ದೇವಸ್ಥಾನದಲ್ಲಿ ಅಥವಾ ಉತ್ಸವಮೂರ್ತಿಯನ್ನು ಸಾಗಿಸುವುದಕ್ಕಾಗಿ ಉಪಯೋಗಿಸುವ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ಇಟ್ಟಿರುವ ಅಥವಾ ಉಪಯೋಗಿಸುವ ಯಾವುದೇ ರಥದ ಮೇಲೆ ಅಥವಾ ಅದರಲ್ಲಿ

– ಕಡೆದ ಅಥವಾ ಕೆತ್ತಿದ ಅಥವಾ ವರ್ಣದಲ್ಲಿ ಚಿತ್ರಿಸಿದ ಅಥವಾ ಅನ್ಯಥಾ ರೂಪಿಸಿದ ಯಾವುದೇ ಪ್ರದರ್ಶನಕ್ಕೆ;

(ಸಿ) ಯಾವ ಫಿಲ್ಮ್‌ಗೆ ಸಂಬಂಧಿಸಿದಂತೆ ಚಲನಚಿತ್ರ ಅಧಿನಿಯಮ, 1952 (1952ರ 37) ರ ಭಾಗ II ರ ಉಪಬಂಧಗಳು ಅನ್ವಯವಾಗುವವೋ ಆ ಯಾವುದೇ ಫಿಲ್ಮ್‌ಗೆ

– ಅನ್ವಯವಾಗತಕ್ಕದ್ದಲ್ಲ.

**5. ಪ್ರವೇಶಿಸಲು ಮತ್ತು ಶೋಧಿಸಲು ಅಧಿಕಾರಗಳು.–** (1) ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಗೆಜೆಟೆಡ್ ಅಧಿಕಾರಿಯು, ಹಾಗೆ ಅವನನ್ನು ಅಧಿಕೃತಗೊಳಿಸಿರುವಂಥ ಪ್ರದೇಶದ ಸ್ಥಳೀಯ ಪರಿಮಿತಿಯೊಳಗೆ,–

(ಎ) ತಾನು ಅವಶ್ಯವೆಂದು ಪರ್ಯಾಲೋಚಿಸುವಂಥ ಸಹಾಯ ಯಾವುದಾದರೂ ಇದ್ದರೆ, ಅದರೊಂದಿಗೆ ಎಲ್ಲಾ ಸೂಕ್ತ ಸಮಯದಲ್ಲಿ ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಎಂದು ನಂಬಲು ತನಗೆ ಕಾರಣಗಳಿರುವಂಥ ಯಾವುದೇ ಸ್ಥಳದೊಳಕ್ಕೆ ಪ್ರವೇಶಿಸಬಹುದು ಮತ್ತು ಅದನ್ನು ಶೋಧಿಸಬಹುದು.

(ಬಿ) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವುದೆಂದು ನಂಬಲು ತನಗೆ ಕಾರಣವಿರುವಂಥ ಯಾವುದೇ ಜಾಹೀರಾತು ಅಥವಾ ಯಾವುದೇ ಪುಸ್ತಕ, ಕರಪತ್ರ, ಕಾಗದ,

ಸ್ಲೈಡ್, ಫಿಲ್ಮ್, ಬರವಣಿಗೆ, ರೇಖಾಚಿತ್ರ, ವರ್ಣಚಿತ್ರ, ಛಾಯಾಚಿತ್ರ, ನಿರೂಪಣೆ ಅಥವಾ ಆಕೃತಿಯನ್ನು ವಶಪಡಿಸಿಕೊಳ್ಳಬಹುದು;

(ಸಿ) ಖಂಡ (ಎ)ನಲ್ಲಿ ನಮೂದಿಸಿರುವ ಯಾವುದೇ ಸ್ಥಳದಲ್ಲಿ ಕಂಡುಬಂದ ಯಾವುದೇ ದಾಖಲೆ, ರಿಜಿಸ್ಟರ್, ದಸ್ತಾವೇಜು ಅಥವಾ ಇತರ ಯಾವುದೇ ಭೌತಿಕ ವಸ್ತುವನ್ನು ಪರೀಕ್ಷಿಸಬಹುದು ಮತ್ತು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿರುವುದರ ಬಗ್ಗೆ ಅದು ಸಾಕ್ಷ್ಯವನ್ನೊದಗಿಸಬಹುದೆಂದು ನಂಬಲು ತನಗೆ ಕಾರಣವಿದ್ದರೆ ಅದನ್ನು ವಶಪಡಿಸಿಕೊಳ್ಳಬಹುದು:

ಪರಂತು, ವಾರಂಟಿಲ್ಲದೆ ಖಾಸಗಿ ವಾಸದ ಮನೆಯೊಳಕ್ಕೆ ಈ ಉಪ ಪ್ರಕರಣದ ಮೇರೆಗೆ ಯಾವುದೇ ಪ್ರವೇಶವನ್ನು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಈ ಉಪ ಪ್ರಕರಣದ ಮೇರೆಗೆ ವಶಪಡಿಸಿಕೊಳ್ಳುವ ಅಧಿಕಾರವನ್ನು, ಅದರ ಅಖಂಡತೆ, ಉಪಯುಕ್ತತೆ ಅಥವಾ ಮಾರಾಟಯೋಗ್ಯ ಮೌಲ್ಯಕ್ಕೆ ಬಾಧಕವಾಗದಂತೆ ಅಂಥ ದಸ್ತಾವೇಜು, ಸಾಮಗ್ರಿ ಅಥವಾ ವಸ್ತುವಿನಿಂದ ಅದನ್ನು ಉಬ್ಬಚ್ಚು ಮಾಡಿರುವ ಕಾರಣದಿಂದ ಅಥವಾ ಅನ್ಯಥಾ ಆ ಜಾಹೀರಾತನ್ನು ಬೇರ್ಪಡಿಸಲು ಆಗದಿದ್ದರೆ ಅಂಥ ದಸ್ತಾವೇಜು, ಸಾಮಗ್ರಿ ಅಥವಾ ವಸ್ತುವಿನ ಒಳಾಂಶಗಳು ಯಾವುದಾದರೂ ಇದ್ದರೆ, ಅವುಗಳನ್ನೊಳಗೊಂಡು ಅಂಥ ಯಾವುದೇ ಜಾಹೀರಾತನ್ನು ಒಳಗೊಂಡಿರುವಂಥ ಯಾವುದೇ ದಸ್ತಾವೇಜು, ಸಾಮಗ್ರಿ ಅಥವಾ ವಸ್ತುವಿಗೆ ಸಂಬಂಧಿಸಿದಂತೆ ಚಲಾಯಿಸಬಹುದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರ ಉಪಬಂಧಗಳನ್ನು ಆದಷ್ಟು ಮಟ್ಟಿಗೆ, ಸದರಿ ಸಂಹಿತೆಯ ಪ್ರಕರಣ 94ರ ಮೇರೆಗೆ ಹೊರಡಿಸಿದ ವಾರಂಟಿನ ಅಧಿಕಾರದ ಮೇರೆಗೆ ಮಾಡಿದ ಯಾವುದೇ ಶೋಧನೆ ಅಥವಾ ವಶಪಡಿಸಿಕೊಳ್ಳುವಿಕೆಗೆ ಅವುಗಳು ಅನ್ವಯವಾಗುವಂತೆಯೇ ಈ ಅಧಿನಿಯಮದ ಮೇರೆಗೆ ಯಾವುದೇ ಶೋಧನೆ ಅಥವಾ ವಶಪಡಿಸಿಕೊಳ್ಳುವಿಕೆಗೆ ಅನ್ವಯವಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಉಪ ಪ್ರಕರಣ (1)ರ (ಬಿ) ಖಂಡ ಅಥವಾ (ಸಿ) ಖಂಡದ ಮೇರೆಗೆ ಯಾವುದನ್ನಾದರೂ ವಶಪಡಿಸಿಕೊಳ್ಳುವಲ್ಲಿ, ಅವನು ಆದಷ್ಟು ಬೇಗ ಅತಿ ಹತ್ತಿರದ ಮ್ಯಾಜಿಸ್ಟ್ರೇಟರಿಗೆ ತಿಳಿಸತಕ್ಕದ್ದು ಮತ್ತು ಅಭಿರಕ್ಷೆಯ ಬಗ್ಗೆ ಅವನ ಆದೇಶಗಳನ್ನು ಪಡೆಯತಕ್ಕದ್ದು.

**6. ದಂಡ.–** ಪ್ರಕರಣ 3ರ ಅಥವಾ ಪ್ರಕರಣ 4ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಮೊದಲನೆಯ ಅಪರಾಧವು ನಿರ್ಣಯವಾದ ಮೇಲೆ ಎರಡು ವರ್ಷಗಳಿಗೆ

ವಿಸ್ತರಿಸಬಹುದಾದಂಥ ಅವಧಿಯ ಯಾವುದೇ ಬಗೆಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಆರು ತಿಂಗಳಿಗೆ ಕಡಿಮೆ ಇಲ್ಲದ, ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ, ಆದರೆ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಸಹ ದಂಡನೀಯವಾಗತಕ್ಕದ್ದು.

**7. ಕಂಪನಿಗಳಿಂದ ಅಪರಾಧ.–** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವನ್ನು ಮಾಡಿದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿ ಅಡಕವಾಗಿರುವುದಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ಹಾಗೂ ಎಲ್ಲಾ ಯುಕ್ತ ಶ್ರದ್ಧೆಯನ್ನು ವಹಿಸಿದ್ದನೆಂದು ಅವನು ರುಜುವಾತುಪಡಿಸಿದರೆ, ಯಾವುದೇ ದಂಡನೆಗೆ ಅಂಥ ಯಾರೇ ವ್ಯಕ್ತಿಯನ್ನು ಗುರಿಪಡಿಸತಕ್ಕದ್ದಲ್ಲ.

(2) ಉಪ ಪ್ರಕರಣ (1)ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ರುಜುವಾತಾದಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ವ್ಯವಹರಣೆಗೆ ಗುರಿಪಡಿಸತಕ್ಕದ್ದು ಮತ್ತು ಅವನು ಅದಕ್ಕೆ ಅನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುದಾರ.

**8. ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಾಗಿರತಕ್ಕದ್ದು.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವು ಜಾಮೀನೀಯವಾಗಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**9. ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವಂಥ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**10. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಜಾಹೀರಾತುಗಳು ಅಥವಾ ಇತರ ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವ ರೀತಿ ಮತ್ತು ವಶಪಡಿಸಿಕೊಂಡ ವಸ್ತುಗಳ ಪಟ್ಟಿಯನ್ನು ತಯಾರಿಸುವ ಮತ್ತು ಯಾರ ಅಭಿರಕ್ಷೆಯಿಂದ ಯಾವುದೇ ಜಾಹೀರಾತು ಅಥವಾ ಇತರ ಸಾಮಗ್ರಿಯನ್ನು ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ಅದನ್ನು ಕೊಡುವ ರೀತಿ;

(ಬಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ

ಅವಧಿಯವರೆಗೆ ಇಡತಕ್ಕದ್ದು. ಅಧಿವೇಶನಗಳಿಗೆ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

* * * * *